**ಸಾಕ್ಷಿಯನ್ನು ದಿಃ 03.01.2018 ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀಸವಾಲುಃ 9ನೇ ಪ್ರತಿವಾದಿ ಪರ ಶ್ರೀ ಎನ್ಎನ್ ವಕೀಲರಿಂದಃ**

1ನೇ ವಾದಿ ವೆಂಕಟರಾಮ ವೆಂಕಟಪ್ಪ ಮಗನಿರುತ್ತಾರೆ. ಈ ದಾವೆಯಲ್ಲಿ 1ನೇ ವಾದಿಯು ವೆಂಕಟೇಶನ ಮಗನೆಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ಸದರಿ 1ನೇ ವಾದಿ ವೆಂಕಟರಾಮರವರು ರೆಡ್ಡಿಹಳ್ಳಿಯಲ್ಲಿ ವಾಸ ಇರುವುದಿಲ್ಲ ಎಂದರೆ ಸರಿಯಲ್ಲ. 2ನೇ ವಾದಿ ಮಾವಳ್ಳಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. 1ನೇ ವಾದಿಯ ತಂದೆಯ ಹೆಸರನ್ನು ನಾನು ತಪ್ಪಾಗಿ ನಮೂದು ಮಾಡಿ ತಪ್ಪು ಸಂಬಂಧವನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ವೆಂಕಟೇಶ್ ಮತ್ತು ವೆಂಕಟಪ್ಪನಿಗೆ ಏನು ಸಂಬಂಧವೆಂದು ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

1 ರಿಂದ 8ನೇ ಪ್ರತಿವಾದಿಯರು ನನ್ನ ಚಿಕ್ಕಪ್ಪನ ಮಕ್ಕಳೆಂದು ವಾದಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. 7 ಮತ್ತು 8ನೇ ಪ್ರತಿವಾದಿಯರು 1ನೇ ವಾದಿಯ ಮಕ್ಕಳಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 9ನೇ ಪ್ರತಿವಾದಿಯು ಬಂಗಾರಪೇಟೆಯ ವಿವೇಕಾನಂದ ನಗರದಲ್ಲಿ ಸುಮಾರು ವರ್ಷಗಳಿಂದ ವಾಸವಿರುತ್ತಾರೆ ಎಂದರೆ ಸರಿ. ನಾನು ದಾವೆಯನ್ನೂಡವ ಸಮಯದಲ್ಲಿ ರೆಡ್ಡಿಹಳ್ಳಿ ಎಂದು 9ನೇ ಪ್ರತಿವಾದಿಯ ವಿಳಾಸವನ್ನು ತೋರಿಸಿರುತ್ತೇವೆ ಎಂದರೆ ಸರಿಯಲ್ಲ.

ಜುಟ್ಟಪ್ಪ, ಈರಪ್ಪ ಮತ್ತು ರಾಮಜುಟ್ಟು ಇವರ ನಡುವೆ ನಮ್ಮ ಸಂಬಂಧ ಏನೆಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ರಾಮಜುಟ್ಟು ಮುನಿರಾಮಪ್ಪನ ಮಗ. ಸದರಿ ದಾವೆಯಲ್ಲಿ ಮುನಿಸ್ವಾಮಪ್ಪನ ಮಗನೆಂದು ಹೇಳಿರುತ್ತೇವೆಂದರೆ ತಪ್ಪಾಗಿ ನಮೂದಾಗಿರುತ್ತದೆ. ದಾವಾ ಆಸ್ತಿ ರಾಮಜುಟ್ಟುವಿನ ಹೆಸರಿನಲ್ಲಿದೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

ದಾವಾ ಆಸ್ತಿ ಮೂಲತಃ ಈರಪ್ಪನಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ವೀರಪ್ಪನ ಮಕ್ಕಳು ಮೊಮ್ಮಕ್ಕಳು ಸೇರಿ ಮುನಿರಾಮಪ್ಪ ಅಲಿಯಾಸ್ ಜುಟ್ಟಪ್ಪನ ಮಗ ಮುನಿವೆಂಕಟಪ್ಪನಿಗೆ ದಿ:11.09.1978ರಂದು ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ಮುನಿವೆಂಕಟಪ್ಪನ ಮಕ್ಕಳೇ 9 ಮತ್ತು 10ನೇ ಪ್ರತಿವಾದಿಗಳು ಎಂದರೆ ಸರಿ. ಸದರಿ ಆಸ್ತಿಯನ್ನು ಕೊಂಡು ಕೊಂಡ ದಿನದಿಂದ

ದಾವಾ ಆಸ್ತಿಯು 9 ಮತ್ತು 10ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ನಂತರ 9 ಮತ್ತು 10ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. ಸದರಿ ಮಾರಾಟವಾದ ವಿಷಯ ನನಗೆ 2011ನೇ ಸಾಲಿನಲ್ಲಿ ತಿಳಿದಿರುತ್ತದೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ಕುಟುಂಬದ ಹೆಸರಿನಲ್ಲಿ ಯಾವತ್ತು ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗೆ 10 ವರ್ಷ ಕಂದಾಯ ಕಟ್ಟಿದ ಬಗ್ಗೆ ಕಂದಾಯ ರಸೀದಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸದರಿ ಕಂದಾಯವನ್ನು ಯಾವ ವರ್ಷದಿಂದ ಯಾವ ವರ್ಷಕ್ಕೆ ಕಟ್ಟಿರುತ್ತೇವೆಂದು ಜ್ಞಾಪಕ ಇಲ್ಲ. ದಾವಾ ಆಸ್ತಿಗೆ ನಾನು ಕಂದಾಯ ಕಟ್ಟಿರುವುದಿಲ್ಲ.

9 ಮತ್ತು 10ನೇ ಪ್ರತಿವಾದಿಗಳ ತಂದೆ ದಾವಾ ಆಸ್ತಿಯುನ್ನು ಕೊಂಡು ಕೊಂಡಾಗಿನಿಂದ ಇಂದಿನವರೆಗೂ ಅವರೇ ಕಂದಾಯವನ್ನು ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. 9 ಮತ್ತು 10ನೇ ಪ್ರತಿವಾದಿಯರೇ ದಾವಾ ಆಸ್ತಿಯ ಮಾಲೀಕರು ಮತ್ತು ಸ್ವಾಧೀನದಾರರಾದ ಕಾರಣ ನಾನು ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಸ್ವಾಧೀನವನ್ನೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯಲ್ಲ ಎಂದರೆ ಸರಿಯಲ್ಲ. 9 ಮತ್ತು 10ನೇ ಪ್ರತಿವಾದಿಯರ ತಂದೆಯ ಹೆಸರಿಗೆ ಆದ ಕ್ರಯಪತ್ರವನ್ನು ನಾನು ಈ ದಾವೆಯಲ್ಲಿ ನ್ಯಾಯಾಲಯದ ಮುಂದೆ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮುನಿವೆಂಕಟಪ್ಪನಿಗೆ 11 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಗಂಡು ಮಕ್ಕಳು 9 ಮತ್ತು 10ನೇ ಪ್ರತಿವಾದಿಯರಿದ್ದು ಹೆಣ್ಣು ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ ಅವರಿಗೆ ಮದುವೆಯಾಗಿ ಗಂಡನ ಮನೆಯಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರ ಹೆಣ್ಣು ಮಕ್ಕಳನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ದಾವೆಯನ್ನೂಡಲು ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲಾ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

(ಎ.ಸಿ. ದಯಾನಂದ ಮೂರ್ತಿ)
ಪ್ರಭಾರ ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಂಗಾರಪೇಟೆ.